## ವಿಷ ನೀಡಿ ಅಮೃತ ಬಯಸಿದರೆ



ಗೋಹತ್ಯಾ ನಿಷೇಧ ಕಾನೂನು ಮಾಡಿದ ಕ್ಷಣ ಗೋವು ಇಲ್ಲಿ ಬದುಕಲು ಸುರಕ್ಷಿತ ವಾತಾವರಣ ಇದೆ ಎನ್ನಲಾಗದು. ಸುತ್ತೆಲ್ಲ ವಿಷವೇ ತುಂಬಿಕೊಂಡಿದೆ. ಅದು ಪ್ಲಾಸ್ಟಿಕ್ ರೂಪದಲ್ಲಿ, ವಿಷಯುಕ್ತ ಮಾಲಿನ್ಯ ರೂಪದಲ್ಲಿ ಅವುಗಳಿಗೆ ಆಹಾರ ಆಗುತ್ತಿವೆ. ಅದು ಪರೋಕ್ಷವಾಗಿ ಗೋವಿನ ಹಾಲನ್ನು ಬಳಸುವ ಮನುಷ್ಯರಿಗೂ ಪರಿಣಾಮ ಬಾಧಿಸುತ್ತಿದೆ.

ಮನೆಯ ಸಮಾರಂಭವೊಂದರಲ್ಲಿ ಸಿಹಿ ಪಾನೀಯ ಸೇವಿಸಿದ ಬಳಿಕ ಹೊರಚೆಲ್ಲಿದ ಪ್ಲಾಸ್ಟಿಕ್ ಲೋಟಗಳನ್ನು ದನಕರುಗಳು ಇಷ್ಟಪಟ್ಟು ತಿಂದು ಖಾಲಿಮಾಡುತ್ತಿವೆ. ಬಿಡಾಡಿ ದನಗಳಿಗೆ ಇವು ಆಹಾರ ಆಗುತ್ತವೆ. ವಿಷವನ್ನು ತಿಂದ ಗೋವು ನೀಡುವ ಹಾಲಿನಲ್ಲೂ ಅದರ ಅಂಶ ಇರುವುದು ಅಷ್ಟೇ ಸತ್ಯ. ಅದು ಹಲವಾರು ರೋಗಗಳಿಗೆ ಕಾರಣ ಆಗುವುದರಲ್ಲಿ ಸಂಶಯವೇ ಇಲ್ಲ. ಇದಲ್ಲಾ ನಾವು ಮಾಡುವ ತಪ್ಪು ಅಲ್ಲವೇ?

—ಅರ್ಚನಾ ಬೊಮ್ನಳ್ಳಿ, ಶಿರಸಿ



## ಬೈಕ್ ಎಂಬ ಮಂದಿರ

ರಾಜಸ್ಥಾನದ ಜೋಧಪುರದಿಂದ ಮೌಂಟ್ ಅಬುಗೆ ಹೋಗುವ ದಾರಿಯಲ್ಲಿ ಪಾಳಿ ಎಂಬ ತಾಲ್ಲೂಕಿನಲ್ಲಿ ಮೋಟಾರ್ ಬೈಕಿನ ದೇವಸ್ಥಾನ ಇದೆ. ಅದರ ಸಮೀಪ 1991ರ ಡಿಸೆಂಬರ್‌ನಲ್ಲಿ ಅಪಘಾತ ಸಂಭವಿಸಿ ಯುವಕನೊಬ್ಬ ಮೃತಪಟ್ಟಿದ್ದ.

ಓಂ ಸಿಂಘ್ ಠಾಕೂರ್ ಎಂಬಾತ 350ಸಿಸಿ ಬುಲೆಟ್ ಬೈಕಿನಲ್ಲಿ ಹೋಗುತ್ತಿದ್ದಾಗ ಮರಕ್ಕೆ ಡಿಕ್ಕಿ ಹೊಡೆದು ಸ್ಥಳದಲ್ಲೇ ಸಾವನ್ನಪ್ಪಿದ್ದ. ನಂತರದ ದಿನಗಳಲ್ಲಿ ಬೈಕಿನಲ್ಲಿ ಕಂಡುಬಂದ ದೋಷಗಳು ಸ್ಥಳೀಯರು ಇದರಲ್ಲಿ ಓಂ ಸಿಂಘ್ ನ ಆತ್ಮ ಇದೆ ಎಂಬ ನಿರ್ಧಾರಕ್ಕೆ ಕಾರಣವಾಗಿದೆ. ನಂತರ ಅದಕ್ಕೊಂದು ದೇವಸ್ಥಾನ ಕಟ್ಟಿದರು. ಆ ಮಾರ್ಗದಲ್ಲಿ ಸಂಚರಿಸುವ ವಾಹನಗಳು ಅಲ್ಲಿ ನಿಲ್ಲಿಸಿ, ಬೈಕಿಗೆ ಪೂಜೆ ಸಲ್ಲಿಸಿ ಮುಂದೆ ಹೋಗುವ ಪರಿಪಾಠವನ್ನು ಕೆಲವರು ರೂಢಿಸಿಕೊಂಡಿದ್ದಾರೆ. ಇಲ್ಲಿ ಗಂಧದ ಕಡ್ಡಿ, ಹೂವು, ತೆಂಗಿನಕಾಯಿಯ ಜೊತೆಗೆ  ಮದ್ಯದ ನೈವೇದ್ಯವನ್ನೂ ಮಾಡುತ್ತಾರೆ. ಬರೀ ದೇವರ ವಿಗ್ರಹಗಳು ಇರುವ ದೇವಸ್ಥಾನಗಳನ್ನು ನೋಡಿದ್ದ ನಮಗೆ ಅಚ್ಚರಿಯಾಗಿದ್ದು ಸುಳ್ಳಲ್ಲ.

—ಎಸ್. ಶಶಿಧರ್, ಬೆಂಗಳೂರು



## ಅಳಿವಿನಂಚಿನಲ್ಲಿರುವ ಗುಬ್ಬಚ್ಚಿಗಳು!

ಇಂದು ಗುಬ್ಬಚ್ಚಿಗಳು ವಿನಾಶದ ಅಂಚಿನಲ್ಲಿವೆ. ಪ್ಯಾಸ್ಸಿರಿಡೇ ಕುಟುಂಬಕ್ಕೆ ಸೇರಿದ ಗುಬ್ಬಚ್ಚಿಯ ವೈಜ್ಞಾನಿಕ ಹೆಸರು ಪ್ಯಾಸ್ಸರ್ ಸ್ಪ್ಯಾರೋ. ಜನರ ಮಧ್ಯ ಬದುಕುವ ಗುಬ್ಬಚ್ಚಿಗಳು ಯಾವಾಗಲೂ ಜೋಡಿಯಾಗಿ ಜೀವಿಸುತ್ತವೆ. ಇವುಗಳ ಬಣ್ಣ ಕಂದು. ಬೆನ್ನು ಹಾಗೂ ಪಕ್ಕಗಳಲ್ಲಿ ಬಿಳಿ ಮತ್ತು ಕಪ್ಪು ಬಣ್ಣ ಮಿಶ್ರಿತವಾಗಿರುತ್ತದೆ. ಗಂಡು ಗುಬ್ಬಚ್ಚಿಗೆ ಗಂಟಲ ಮೇಲೆ ಕಪ್ಪು ಕಲೆಯಿದೆ. ಗುಬ್ಬಿಯ ಕಾಲು ತೆಳ್ಳಗಿರುವುದರಿಂದ ನಡೆಯಲು ಕಷ್ಟವಾಗುತ್ತದೆ. ಹಾಗಾಗಿ ಜಿಗಿಯುತ್ತ, ಹಾರುತ್ತ ಮುಂದಕ್ಕೆ ಸಾಗುತ್ತವೆ.

ಇವು ಧಾನ್ಯ, ಹುಳುಹುಪ್ಪಟೆಯನ್ನು ಸೇವಿಸುತ್ತವೆ. ಒಂದು ಸಲಕ್ಕೆ ಹೆಣ್ಣು ಗುಬ್ಬಚ್ಚಿ 34 ಮೊಟ್ಟೆಗಳನ್ನಿಡುತ್ತದೆ. ಮಾರ್ಚ್ 20ರಂದು ಅಂತರರಾಷ್ಟ್ರೀಯ ಗುಬ್ಬಚ್ಚಿ ದಿನವೆಂದು ಆಚರಿಸಲಾಗುತ್ತದೆ.

—ಪ್ರಕಾಶ ಎಸ್.ಮನ್ನಂಗಿ